ಮೂಲ ದಾವಾ ಸಂಖ್ಯೆ. 112/2025 ಪಿ ಡಬ್ಲ್ಯೂ 1

(ದಿನಾಂಕ 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀಮತಿ ವಿ ಎಸ್ ಹೆಚ್ ವಕೀಲರಿಂದಃ-

ನನ್ನ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಹಾಜರುಪಡಿಸಿದ್ದು ಅದನ್ನು ನಿಪಿ-18 ಎಂದು, ನನ್ನ ಪಿ ಯು ಸಿ ಅಂಕಪಟ್ಟಿ ಹಾಜರುಪಡಿಸಿದ್ದು ಅದನ್ನು ನಿಪಿ-19 ಎಂದು, ನನ್ನ ಜನನ ದಾಖಲೆ ನಹಾಜರುಪಡಿಸಿದ್ದು ಅದನ್ನು ನಿಪಿ-20 ಎಂದು, ಅರ್ಹತಾ ಪ್ರಮಾಣಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-21 ಎಂದು, ಬ್ಯಾಂಕ್ ಪಾಸ್ ಬುಕ್ ಪ್ರಮಾಣಪತ್ರ ಹಾಜರುಪಡಿಸಿದ್ದು ಅದನ್ನು ಪಿ-22 ಎಂದು, ನನ್ನ ಚುನಾವಣಾ ಗುರುತಿನ ಚೀಟಿ, ಪಾನ್ ಕಾರ್ಡ ಮತ್ತು ಆಧಾರ ಕಾರ್ಡಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-23 ರಿಂದ 25 ಎಂದು, 3 ಸ್ವಡಿ ಪ್ರಮಾಣಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-26 ರಿಂದ 28 ಎಂದು, 10 ನೇ ಪ್ರತಿವಾದಿ ನೀಡಿರುವಂತಹ ಸ್ವಡಿ ಸರ್ಟಿಫಿಕೇಟ್ ಹಾಜರುಪಡಿಸಿದ್ದು ಅದನ್ನು ನಿಪಿ-29 ಎಂದು, ಆದಾಯ ಮತ್ತು ಜಾತಿ ಪ್ರಮಾಣಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-30 ಎಂದು, ವಾಸಸ್ಥಳ ಪ್ರಮಾಣಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-31 ಎಂದು, ಕರ್ನಾಟಕ ವೈಧ್ಯಕೀಯ ಮಂಡಳಿಯ ನೊಂದಣಿ ಪ್ರಮಾಣಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-32 ಎಂದು, ಅಫಿಶಿಯಲ್ ಮೆಮೋರ್ಯಾಡಂ ಹಾಜರುಪಡಿಸಿದ್ದು ಅದನ್ನು ನಿಪಿ-33 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 1 ರಿಂದ 9 ನೇ ಪ್ರತಿವಾದಿಗಳ ಪರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು ಎಂ ಬಿ ಬಿ ಎಸ್ ಪದವಿಯನ್ನು ಪಡೆದಿರುತ್ತೇನೆ. ನನ್ನ ಸ್ವಂತ ಊರು ಹೆಚ್ ಬಿ ಹಳ್ಳಿ ಇರುತ್ತದೆ. ನನ್ನ ತಂದೆ ತಾಯಿಗೆ ಒಟ್ಟು 6 ಜನ ಮಕ್ಕಳು ಇರುತ್ತೇವೆ. ನನ್ನ ಸಹೋದರ ಸಹೋದರಿಯರೆಲ್ಲರೂ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ತಂದೆ ತಾಯಿ 3 ನೇ ತರಗತಿವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿರುತ್ತಾರೆ. 12 ನೇ ಪ್ರತಿವಾದಿ ಶಾಲೆಯಲ್ಲಿ ನಾನು 1 ನೇ ತರಗತಿಗೆ ಪ್ರವೇಶ ಪಡೆದಿರುತ್ತೇನೆ. ನನ್ನ ತಂದೆ ಮತ್ತು ನನ್ನ ಮಾವ ನನ್ನನ್ನು ಶಾಲೆಗೆ ಸೇರಿಸಿರುತ್ತಾರೆ. ನನ್ನನ್ನು ಶಾಲೆಗೆ ಸೇರಿಸುವ ಸಮಯದಲ್ಲಿ ನನ್ನ ಹೆಸರನ್ನು ವೆಂಕಟೇಶಲು.ಎಂ ಅಂತಾ ದಾಖಲುಪಡಿಸಿರುತ್ತಾರೆಂದರೆ ಸರಿ. ಆ ಸಮಯದಲ್ಲಿ ವೆಂಕಟ ಸೂರಜ್ ಎಂ ಅಂತಾ ಶಾಲೆಯಲ್ಲಿ ಸೇರಿಸಿರುವುದಿಲ್ಲವೆಂದರೆ ಸರಿ. ನನ್ನ ಶಾಲಾ ದಾಖಲಾತಿಯಲ್ಲಿ ಮತ್ತು ನನಗೆ ಸೇರಿದ ಎಲ್ಲಾ ದಾಖಲೆಗಳಲ್ಲಿ ನನ್ನ ಹೆಸರು ವೆಂಕಟೇಶಲು.ಎಂ ಅಂತಾ ನಮೂದು ಇದೆ ಎಂದರೆ ಸರಿ. ನನಗೆ ಶಾಲೆಗೆ ಸೇರಿಸುವ ಸಮಯದಲ್ಲಿ ನನ್ನ ಹೆಸರನ್ನು ವೆಂಕಟೇಶಲು ಎಂ ಅಂತಾ ಬರೆಸಿದ್ದು ಅದೇ

ರೀತಿ ಶಾಲಾ ದಾಖಲೆಗಳಲ್ಲಿ ಇದೆ ಎಂದರೆ ಸರಿ. ನನಗೆ ಸೇರಿದ ಯಾವುದೇ ದಾಖಲೆಗಳಲ್ಲಿ ನನ್ನ ಹೆಸರು ತಪ್ಪು ನಮೂದು ಆಗಿಲ್ಲ ಮತ್ತು ತಿದ್ದುಪಡಿಯಾಗಿಲ್ಲವೆಂದರೆ ಸರಿ.

ನಾನು ಜ್ಯೋತಿಷ್ಯರ ನಿರ್ದೇಶನದಂತೆ ನನ್ನ ಹೆಸರನ್ನು ಬದಲಾವಣೆ ಮಾಡಿಕೊಳ್ಳಲು ನ್ಯಾಯಾಲಯಕ್ಕೆ ದಾವೆ ದಾಖಲಿಸಿದ್ದೇನೆ. ನಾನು ಸನ್ 2024 ಡಿಸೆಂಬರ್ ತಿಂಗಳಲ್ಲಿ ಜ್ಯೋತಿಷಿ ಬಳಿ ಹೋಗಿದ್ದೆ. ನನ್ನ ಸಹೋದರಿಗೆ ವಿವಾಹ ಸಂಬಂಧ ಜ್ಯೋತಿಷ್ಯರ ಬಳಿ ಕೇಳಲು ಹೋದಾಗ ನನ್ನ ಬಗ್ಗೆ ಸಹಾ ಜ್ಯೋತಿಷ್ಯರ ಬಳಿ ಕೇಳಬೇಕೆನಿಸಿದ ಮೇರೆಗೆ ನಾನು ಕೇಳಿದಾಗ ಅವರು ನನಗೆ ನನ್ನ ಹೆಸರನ್ನು ಬದಲಾವಣೆ ಮಾಡಿಕೊಳ್ಳಲು ತಿಳಿಸಿರುತ್ತಾರೆ. ವೆಂಕಟೇಶಲು. ಎಂ ಹೆಸರಿನಿಂದ ನನಗೆ ಯಾವುದೇ ತೊಂದರೆ ಇಲ್ಲ ಆದರೆ ಹೆಸರನ್ನು ವೆಂಕಟ ಸೂರಜ್ ಅಂತಾ ಬದಲಾವಣೆ ಮಾಡಿಕೊಂಡಲ್ಲಿ ಭವಿಷ್ಯದಲ್ಲಿ ಇನ್ನೂ ಅಭಿವೃದ್ಧಿ ಹೊಂದಬಹುದೆನ್ನುವ ಕಾರಣಕ್ಕೆ ನಾನು ಹೆಸರು ಬದಲಾವಣೆಯನ್ನು ಕೇಳುತ್ತಿದ್ದೇನೆ. ನನಗೆ ವೆಂಕಟೇಶಲು.ಎಂ ಅಂತಾ ನಾಮಕರಣ ಮಾಡಿದ ದಿನದಿಂದ ಇಲ್ಲಿಯವರೆಗೂ ಸದರಿ ಹೆಸರಿನಿಂದ ನನಗೆ ಯಾವುದೇ ತೊಂದರೆಯಾಗಿಲ್ಲವೆಂದರೆ ಸರಿ. ನನಗೆ ಸದರಿ ಹೆಸರಿನಿಂದ ಯಾವುದೇ ತೊಂದರೆಯಾಗದಿದ್ದರೂ ಸಹಾ ಸದರಿ ಹೆಸರು ಬದಲಾವಣೆ ಕೋರಿ ನ್ಯಾಯಾಲಯಕ್ಕೆ ದಾವೆಯನ್ನು ದಾಖಲಿಸಿದ್ದೇನೆಂದರೆ ಸರಿ. ನಿಪಿ-1 ಕುಂಡಲಿಯನ್ನು ಜ್ಯೋತಿಷ್ಯರು ವೆಂಕಟ ಸೂರಜ್. ಎಂ ಅಂತಲೇ ನೀಡಿರುತ್ತಾರೆಂದರೆ ಸರಿ. ವೆಂಕಟೇಶಲು.ಎಂ ಎನ್ನುವ ಹೆಸರಿಗೆ ನನ್ನ ಜೀವನದಲ್ಲಿ ತೊಂದರೆಗಳು ಉಂಟಾಗುತ್ತವೆನ್ನುವ ಬಗ್ಗೆ ಯಾವುದೇ ಜ್ಯೋತಿಷ್ಯರು ಕುಂಡಲಿಯನ್ನು ನೀಡಿಲ್ಲ. ಸದರಿ ನಿಪಿ-1 ನೀಡಿದ ಜ್ಯೋತಿಷ್ಯರನ್ನು ಈ ದಾವೆಯಲ್ಲಿ ನಾನು ಸಾಕ್ಷಿದಾರರು ಅಂತಾ ತೋರಿಸಿರುವುದಿಲ್ಲ.

ಸರ್ಕಾರಿ ಅಧಿಕಾರಿಗಳ ವಿರುದ್ಧ ದಾವೆ ದಾಖಲಿಸುವ ಪೂರ್ವದಲ್ಲಿ ಸಿ ಪಿ ಸಿ ಕಲಂ.79 ಮತ್ತು 80 ರಂತೆ 2 ತಿಂಗಳ ಪೂರ್ವಭಾವಿ ನೋಟೀಸನ್ನು ನೀಡಬೇಕೆಂದರೆ ಸರಿ. ನ್ಯಾಯಾಲಯದಿಂದ ಡಿಕ್ರಿ ತಂದಲ್ಲಿ ಮಾತ್ರ ಪ್ರತಿವಾದಿಯರು ನನ್ನ ಹೆಸರು ಬದಲಾವಣೆ ಮಾಡಲು ಬರುತ್ತದಂತಾ ಹಿಂಬರಹವನ್ನು ಸಹಾ ನೀಡಿರುತ್ತಾರಂತಾ ಹೇಳಿದ್ದು ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ಸಂಬಂಧಿಸಿದ ಇಲಾಖೆಯವರು ಯಾವುದೇ ಹಿಂಬರಹವನ್ನು ನೀಡಿಲ್ಲ ಆದ್ದರಿಂದ ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ನನ್ನ ಹೆಸರಿನ ಬದಲಾವಣೆಯಲ್ಲಿ ಪ್ರತಿವಾದಿಯರದ್ದು ಯಾವುದೇ ತಪ್ಪು ಇಲ್ಲದಿದ್ದರೂ ಸಹಾ ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮತ್ತು ಸರ್ಕಾರಕ್ಕೆ ತೊಂದರೆ ಕೊಡಲು ಸುಳ್ಳು ದಾವೆ ದಾಖಲಿಸಿದ್ದೇನೆಂದರೆ

ಸರಿಯಲ್ಲ. ಹೆಸರು ಬದಲಾವಣೆಯಿಂದ ಸರ್ಕಾರದಿಂದ ಲಾಭ ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆ ದಾಖಲಿಸಿ ಸುಳ್ಳು ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ